ವೈಸರ್ಸ್ ಜೊತೆಗೆ ಶಾಮೀಲಾಗಿದ್ದಾರೆ ಎಂದು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ. ನಾನು ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ಅವರು ಸೂಕ್ತ ದಾಖಲೆಗಳನ್ನು ತಮ್ಮ ಮುಖಾಂತರ ಕೊಟ್ಟರೆ, ಅದನ್ನು ಲೋಕಾಯುಕ್ತಕ್ಕೆ ಕೂಡ ಕಳುಹಿಸಲಿಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಕೆ. ಎಚ್. ಪಟೀಲ್.—ಮಾನ್ಯ ಮಂತ್ರಿಗಳು ಇಲ್ಲಿಯೇ ಇರುವುದರಿಂದ, ಸದಸ್ಯರು ಏನಾದರೂ ಆಪಾದನೆಗಳನ್ನು ಮಾಡಿದರೆ, ಅದರ ಬಗ್ಗೆ ವಿವರಣೆಯನ್ನು ಮಂತ್ರಿಗಳು ಕೊಡಲಿ. ಎಲ್ಲದಕ್ಕೂ ಸೂಕ್ತ ದಾಖಲೆಗಳನ್ನು ಕೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು ಏನು ಹೇಳಿದರು ಅಂದರೆ, ಭ್ರಷ್ಟಾಚಾರ ನಡೆದ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇವೆ. ಅಧಿಕಾರಿಗಳ ಸಂಬಂಧೀಕರು ಇದರಲ್ಲಿ ಸೇರಿಕೊಂಡು ಅಕ್ರಮ ನಡೆಸಿದ್ದಾರೆ ಇದಕ್ಕೆ ಮಂತ್ರಿಗಳು ಶಾಮೀಲಾಗಿದ್ದಾರೆ ಎಂದು ಹೇಳಿದ್ದಾರೆ. ಅದು ರಿಕಾರ್ಡ್‌ಗೆ ಹೋಗಿದೆ. ತಾವುಗಳು ಈಗ ಬೇರೆ ಪ್ರಶ್ನೆಗೆ ಹೋಗುವ ಮುಂಚೆ ತಮ್ಮ ಕ್ಷಮೆ ಕೋರಿ ಒಂದು ಮಾತನ್ನು ಈ ಕುರಿತು ಹೇಳಬಯಸುತ್ತೇನೆ. ಏಕೆಂದರೆ ಸರಕಾರದ ಮೇಲೆ ಇಷ್ಟೊಂದು ಗುರುತರವಾದ ಆಪಾದನೆಗಳನ್ನು ಮಾಡಿದಾಗ, ಯಾವುದೇ ಕಾರಣದಿಂದ ಆದರಿಂದ ನುಣುಚಿಕೊಳ್ಳಬಾರದು ಎಂದು ಈ ಮಾತನ್ನು ಹೇಳಿದ್ದಾರೆ. ಏನಾದರೂ ಸೂಕ್ತ ದಾಖಲೆಗಳು ಇದ್ದರೆ ಕೊಡಿ, ವಿಚಾರಣೆ ಮಾಡಿಸುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಕೃಷಿಮಂತ್ರಿಯಂಪರು ವಿವರಣೆಯನ್ನು ಕೊಟ್ಟಿದ್ದಾರೆ. ಅವರ ಗಮನಕ್ಕೆ ಬಂದಿರುವುದನ್ನು ಅವರು ಉತ್ತರಿಸಿದ್ದಾರೆ. ಯಾವುದೇ ಸದಸ್ಯರ ಹಕ್ಕನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ತಮ್ಮಲ್ಲಿರತಕ್ಕಂತಹ ಮಾಹಿತಿಯನ್ನು ಕೊಡಲಿ, ಅದರ ಮೇಲೆ ಪ್ರಾಮಾಣಿಕವಾದಂತಹ ಕ್ರಮವನ್ನು ಸರಕಾರ ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಚ್ಛಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ನಿಗಮದ ಬಗ್ಗೆ

೧೧೨೫ ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ) ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಾಪುರದಲ್ಲಿ ಕೃಷ್ಣಾ ಜಲಾನಯನ ಪ್ರದೇಶದ ಅಭಿವೃದ್ಧಿ ನಿಗಮ ಅಸ್ತಿತ್ವಕ್ಕೆ ಬಂದಿದ್ದು ಯಾವಾಗ ?

ಆ) ಈ ನಿಗಮದ ಕಾರ್ಯವ್ಯಾಪ್ತಿಗೆ ಒಪ್ಪಿಸಿರುವ ಕೆಲಸಗಳು ಏನು ?

ಇ) ಇಲ್ಲಿ ಎಷ್ಟು ಜನ ಸಿಬ್ಬಂದಿಯವರು ಕೆಲಸ ಮಾಡುತ್ತಿದ್ದಾರೆ (ವಿವರ ಒದಗಿಸುವುದು) ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಮತ್ತು ನೀರಾವರಿ ಮಂತ್ರಿಗಳು).—

ಅ) ೯-೬-೧೯೮೬ರಂದು ಅಸ್ತಿತ್ವಕ್ಕೆ ಬಂದಿತು.

ಆ) ಕೆಳಕಂಡ ಜಿಲ್ಲೆಗಳಲ್ಲಿ ಬರುವ ಏತ ನೀರಾವರಿ ಯೋಜನೆಗಳು :

(೧) ಶಿವಮೊಗ್ಗ (೨) ಚಿತ್ರದುರ್ಗ (೦) ಉತ್ತರ ಕನ್ನಡ (೪) ಬೆಳಗಾವಿ (೫) ವಿಜಾಪುರ (೬) ಧಾರವಾಡ (೭) ಗುಲ್ಬರ್ಗಾ (೮) ಬೀದರ್ (೯) ಬಳ್ಳಾರಿ (೧೦) ರಾಯಚೂರು.

೫)	೧) ವ್ಯವಸ್ಥಾಪಕ ನಿರ್ದೇಶಕರು	೧
	೨) ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು	೩
	೩) ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್	೧
	೪) ಅಕೌಂಟ್ಸ್ ಸೂಪರಿಂಟಿಂಡೆಂಟ್	೧
	೫) ಹಿರಿಯ ಸಹಾಯಕರು (ಪ್ರಥಮ ದರ್ಜೆ ಗುಮಾಸ್ತರು)	೨
	೬) ಪ್ರಥಮ ದರ್ಜೆ ಸ್ಟೋರ್ ಕೀಪರ್	೧
	೭) ಜವಾನರು	೩
	೮) ಡ್ರೈವರ್	೧
	ಒಟ್ಟು,	೧೩

ಕಾವೇರಿ ಮತ್ತು ಕೃಷ್ಣಾ ಕೊಳ್ಳದ ಭಾರಿ ನೀರಾವರಿ ಯೋಜನೆಗಳು

೭೩೧(ಎ) ಶ್ರೀ ಎಸ್. ಎಸ್. ಕಡಪಟ್ಟಿ, (ಹೊನಗಂದ) ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮತ್ತು ಕಾವೇರಿ ಕೊಳ್ಳಗಳಲ್ಲಿನ ಭಾರಿ ನೀರಾವರಿ ಯೋಜನೆಗಳಿಗೆ ೧೯೮೪–೮೫, ೧೯೮೫–೮೬ ಮತ್ತು ೧೯೮೬–೮೭ರ ಸಾಲಿಗೆ ನಿಗದಿಗೊಳಿಸಿದ್ದ ಹಣ ಮತ್ತು ಮಾಡಿದ ವೆಚ್ಚದ ಯೋಜನಾವಾರು ವಿವರಗಳನ್ನು ಕೊಡತಕ್ಕದ್ದು.

ಆ) ಈ ಎಲ್ಲಾ ಯೋಜನೆಗಳ ಮೇಲೆ ೧೯೮೬–೮೭ನೇ ಸಾಲಿನಲ್ಲಿ ೧೯೮೭ನೇ ಜನವರಿ ಅಂತ್ಯದವರೆಗೆ ಮಾಡಿದ ವೆಚ್ಚ, ೧೯೮೭ನೇ ಜನವರಿ ಅಂತ್ಯದವರೆಗೆ ಪಾವತಿಯಾಗದೆ ಬಾಕಿ ಉಳಿದಿರುವ ಬಿಲ್ಲುಗಳ ವಿವರಗಳನ್ನು ಮತ್ತು ಮಾರ್ಚ್ ೧೯೮೭ರ ಅಂತ್ಯದವರೆಗಿನ ಅಂದಾಜು ವೆಚ್ಚ.

ಇ) ಈ ಯೋಜನೆಗಳಿಗೆ ನಿಗದಿಗೊಳಿಸಲಾಗಿದ್ದ ಹಣವನ್ನು ಪೂರ್ತಿ ಖರ್ಚು ಮಾಡದಿರಲು ಕಾರಣಗಳೇನು ಮತ್ತು ಇಂತಹ ವ್ಯಪಗತಗಳು (ಲ್ಯಾಪ್ಸಸ್) ಆಗದಿರುವುದಕ್ಕೆ ಸರ್ಕಾರವು ಕೈಗೊಳ್ಳುವ ಕ್ರಮಗಳೇನು ?

ಈ) ಒಂದು ಯೋಜನೆಗೆ ನಿಗದಿಗೊಳಿಸಲಾಗಿದ್ದು ಖರ್ಚಾಗದೆ ಉಳಿದ ಹಣವನ್ನು ಮಂತ್ರಿಂದು ಯೋಜನೆಗೆ ವರ್ಗಾಯಿಸಿರುವ ಪ್ರಕರಣಗಳು ಇವೆಯೇ ? ಹಾಗಿದ್ದಲ್ಲಿ, ಯೋಜನಾವಾರು ವಿವರಗಳನ್ನು ಕೊಡತಕ್ಕದ್ದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).–

ಅ) ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಂ ೩,೪ ಮತ್ತು ೫ನೇ ಕಲಮುಗಳಲ್ಲಿ ಕೊಡಲಾಗಿದೆ.

ಆ) ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯ ೫,೬ ಮತ್ತು ೭ನೇ ಕಲಮುಗಳಲ್ಲಿ ನೀಡಲಾಗಿದೆ.

ಇ) ನಿಗದಿಗೊಳಿಸಲಾಗಿದ್ದ ಹಣದ ಪೂರ್ಣ ಉಪಯೋಗವಾಗದಿರುವ ಪ್ರಕರಣಗಳಿಗೆ ಮುಂಖ್ಯ ಕಾರಣಗಳನ್ನು ಈ ಕೆಳಗೆ ತಿಳಿಸಲಾಗಿದೆ.

(೧) ಕಾಲಾನುಕಾಲಕ್ಕೆ ಸಿಮೆಂಟ್ ಮತ್ತು ಉಕ್ಕು ದೊರೆಯದಿರುವುದು

(೨) ಹಲವು ಪ್ರಕರಣಗಳಲ್ಲಿ ನ್ಯಾಯಾಲಯದ ಮುಂದೆಯೂ ಬಂದಿರುವಂಥ ಭೂ ಸ್ವಾಧೀನ ಸಮಸ್ಯೆಗಳು.

(೩) ಪಂಚಾಯಿತಿಗೆ ಒಳಗಾದ ಪ್ರಕರಣಗಳು ಮುಂತಾದವುಗಳು. ಇಂತಹ ಸಮಸ್ಯೆಗಳನ್ನು ಸಾಧ್ಯವಾದಷ್ಟು ಬೇಗ ನಿವಾರಿಸಲಾಗುತ್ತಿದೆ.

ಈ) ಇಂತಹ ಪ್ರಕರಣಗಳು ಯಾವುವೂ ಇಲ್ಲ.